ಓಎಸ್. 296/2020 ಪಿಡಬ್ಲ್ಯೂ:2

ದಿನಾಂಕ: 26.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಕೆ ಎಸ್ ಜಿ ಎಸ್ ವಕೀಲರಿಂದ:

ನಿಪಿ 10 ರಂತೆ ಹಿಂಬರಹ ಪಡೆಯುವ ಮೊದಲು ಅಸೆಸ್ಮೆಂಟ್ ನಂ.89 ರ ಆಸ್ತಿಯು ನಾಗಬಸವಣ್ಣ ಬಿನ್ ಕಾಗೆ ನಂಜಶೆಟ್ಟಿ ಎಂಬುವರ ಹೆಸರಿಗೆ ಹೇಗೆ ವರ್ಗಾವಣೆಯಾಗಿರುತ್ತದೆ ಎಂದು ಅರ್ಜಿ ಸಲ್ಲಿಸಿದ್ದೆನು ಎಂದರೆ ಸರಿ. ಸದರಿ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸದರಿ ಅರ್ಜಿಯನ್ನು ಹಾಜರು ಪಡಿಸಿರುವುದಿಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅರ್ಜಿಯ ಸ್ವೀಕೃತಿ ನನ್ನ ಬಳಿ ಇದ್ದು ಹಾಜರು ಪಡಿಸಿರುವುದಿಲ್ಲ. ಈಗ ನಾಗಬಸವಣ್ಣನವ ಹೆಸರಿನಲ್ಲಿ ಖಾತೆ ಇರುತ್ತದೆ ಎಂದರೆ ಸರಿಯಲ್ಲ. ನಿಪಿ 10 ಮತ್ತು ನಾನು ಸಲ್ಲಿಸಿರುತ್ತೇನೆ ಎನ್ನುವ ಅರ್ಜಿಯು ದಾವಾ ಸ್ವತ್ತಿಗೆ ಸಂಬಂಧಿಸಿರುತ್ತದೆ. ದಾವಾ ಸ್ವತ್ತು ಈಗ ವ್ಯವಸಾಯದ ಜಮೀನು ಆಗಿರದೆ ಅಸೆಸ್ಮೆಂಟ್ ನಂಬರ್ ಹೊಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಜಮೀನು ಮೊದಲು ವ್ಯವಸಾಯದ ಜಮೀನು ಆಗಿದ್ದು ಸುಮಾರು 15 ವರ್ಷಗಳಿಂದ ಸದರಿ ಜಮೀನಿನಲ್ಲಿ ಮನೆಗಳನ್ನು ನಿರ್ಮಾಣ ಮಾಡಲಾಗಿರುತ್ತದೆ ಎಂದು ನುಡಿಯುತ್ತಾರೆ.

ನಿಪಿ 10 ರಲ್ಲಿ 1997 ರಲ್ಲಿ ಆಸ್ತಿಗೆ ಅಸೆಸ್ಮೆಂಟ್ ನಂಬರ್ ನೀಡಲಾಗಿದೆ ಎಂದು ಹಿಂಬರಹ ನೀಡಲಾಗಿದೆ ಎಂದರೆ, ಸಾಕ್ಷಿ ಸುಳ್ಳು ದಾಖಲೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಈಗ ನಿಪಿ 10 ರಲ್ಲಿ ಕಾಣಿಸಿದ ಅಸೆಸ್ಮೆಂಟ್ ಸಂಖ್ಯೆಯ ಆಸ್ತಿಯಲ್ಲಿ ಪ್ರತಿವಾದಿಯು ಸ್ವಾಧೀನತೆ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಮತ್ತು ನಮ್ಮ ನಡುವೆ ಮಾಲೀಕ ಮತ್ತು ಬಾಡಿಗೆದಾರರ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ10 ರಲ್ಲಿ ಕಾಣಿಸಿದ ಅಸೆಸ್ಮೆಂಟ್ ನಂ.89 ರ ಆಸ್ತಿಯ ಸಂಪೂರ್ಣ ಮಾಲೀಕರು ಪ್ರತಿವಾದಿ ಇರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.